ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಹೇಮಲತಾ ನಾಯಕ್ ರವರು ನಿಯಮ-72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 157ಕ್ಕೆ ಉತ್ತರ

ಗಮನ ಸೆಳೆಯುವ ಸೂಚನೆ:

ಕೊಪ್ಪಳ ಜಿಲ್ಲೆಯ ಗಂಗಾವತಿ ವಿಧಾನಸಭಾ ಕ್ಷೇತ್ರದ ಕಿನ್ನಾಳ ಗ್ರಾಮದಲ್ಲಿ ಕರಕುಶಲ ಕರ್ಮಿಗಳಾದ ಚಿತ್ರಗಾರ ಕಲಾವಿದರು ಸು.20 ವರ್ಷಗಳಿಂದ ತಯಾರಿಸುವ ಕಿನ್ನಾಳ ಕಲೆಯ ವಸ್ತುಗಳನ್ನು ಕರಕುಶಲ ಅಭಿವೃದ್ಧಿ ನಿಗಮವು ಖರೀದಿಸುವುದನ್ನು ನಿಲ್ಲಿಸಿದೆ. ಇದರಿಂದ 60 ಕುಟುಂಬ ಕಲಾವಿದರ ಜೀವನ ಕಷ್ಟಕರವಾಗಿದೆ. ವಿಶ್ವ ಯೋಜನೆ ಅಡಿಯಲ್ಲಿ 15 X 25 ವಿಸ್ತೀರ್ಣದ 30 ಮನೆಗಳನ್ನು 25 ವರ್ಷಗಳ ಹಿಂದೆ ನಿರ್ಮಾಣವಾಗಿ, ಸದರಿ ಮನೆಗಳ ಮಾಸಿಕ ಕಂತು ಕಟ್ಟಲು ಕೂಡ ಕರಕುಶಲ ಕರ್ಮಿಗಳಾದ ಕಲಾವಿದರು ದುಃಖಿಸುತ್ತಿದ್ದಾರೆ. ಆದ್ದರಿಂದ ಕಿನ್ನಾಳ ಗ್ರಾಮದಲ್ಲಿ ಕರಕುಶಲ ಅಭಿವೃದ್ಧಿ ನಿಗಮದಿಂದ ಖರೀದಿ ಕೇಂದ್ರ ಪುನಃ ಪ್ರಾರಂಭಿಸುವ ವಿಷಯದ ಕುರಿತು ಮಾನ್ಯ ಸಣ್ಣ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯದ ಪಾರಂಪರಿಕ ಕರಕುಶಲ ಕಲೆಗಳಲ್ಲಿ ಒಂದಾದ ಕಿನ್ನಾಳ ಕಲೆಗಳು ಸೇರಿದಂತೆ ವಿವಿಧ ಕಲೆಗಳನ್ನು ಉಳಿಸಿ, ಬೆಳೆಸುವಲ್ಲಿ ನಿರತವಾಗಿರುತ್ತದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ವಿಧಾನಸಭಾ ಕ್ಷೇತ್ರದ ಕಿನ್ನಾಳ ಗ್ರಾಮದಲ್ಲಿ ತಯಾರಿಸಿದ ಕಿನ್ನಾಳದ ಟಾಯ್ಸ್ ಕಲಾಕೃತಿಗಳನ್ನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು ಕರಕುಶಲ ಕರ್ಮಿಗಳಿಂದ ಖರೀದಿಸುತ್ತಾ ಬಂದಿದ್ದು, ಖರೀದಿಯನ್ನು ನಿಲ್ಲಿಸಿರುವುದಿಲ್ಲ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಕ್ಕೆ ಸರಬರಾಜು ಮಾಡಲು ಬಂದ ಕರಕುಶಲ ಕರ್ಮಿಗಳ ಕಲಾಕೃತಿಗಳನ್ನು ಎಂದಿಗೂ ವಾಪಸ್ ಕಳುಹಿಸಿರುವುದಿಲ್ಲ.

1) ಕಿನ್ನಾಳ ಕಲೆಗೆ ಸಂಬಂಧಪಟ್ಟಂತೆ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕಿನ್ನಾಳದಲ್ಲಿ ಸುಮಾರು 60 ಕರಕುಶಲ ಕರ್ಮಿಗಳನ್ನು ಗುರುತಿಸಿ, 1997ನೇ ಸಾಲಿನಲ್ಲಿ 60 ವಸತಿ ಕಾರ್ಯಾಗಾರಗಳನ್ನು ನೊಂದಾಯಿತ ಕರಕುಶಲ ಕರ್ಮಿಗಳಿಗೆ ಹಂಚಿಕೆ ಮಾಡಲಾಗಿದೆ.

2) ಸದರಿ ಕರಕುಶಲ ಕರ್ಮಿಗಳು ತಯಾರಿಸಿದ ಕಿನ್ನಾಳದ ಕಲಾಕೃತಿಗಳನ್ನು ಖರೀದಿಸಿ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಕಾವೇರಿ ಮಾರಾಟ ಮಳಿಗೆಗಳಲ್ಲಿ ವ್ಯಾಪಾರ ವಹಿವಾಟನ್ನು ನಡೆಸಲಾಗುತ್ತಿದೆ.

3) ಕಿನ್ನಾಳ ಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕಿನ್ನಾಳ ಕಲೆಗೆ ಜಿ.ಐ. ಟ್ಯಾಗ್ ಅನ್ನು 2010 ರಲ್ಲಿ ನೊಂದಾಯಿಸಲಾಗಿರುತ್ತದೆ.

4) ಕಿನ್ನಾಳ ಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಅಲ್ಪಪರಿಚಿತ ಕಲೆ ಎಂದು ಪರಿಗಣಿಸಿ, 20% ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

5) ಇನ್ನೂ ಹೆಚ್ಚಿನ ಉತ್ತೇಜನ ನೀಡಲು ನಿಗಮದ ಆನ್ ಲೈನ್ ಪೋರ್ಟಲ್ ಹಾಗೂ ಅಮೆಜಾನ್ ಫ್ಲಿಪ್ ಕಾರ್ಟ್ ನಲ್ಲಿ ಕೂಡ ಅಪ್ ಲೋಡ್ ಮಾಡಲಾಗಿರುತ್ತದೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಿನ್ನಾಳದ ಕಲೆಗೆ ಜಿ.ಐ. ಟ್ಯಾಗ್ ಅನ್ನು ಹೊಂದಿದ್ದು, ಈ ಕಲೆಯನ್ನು ಉಳಿಸಿ, ಬೆಳೆಸುವುದು ನಿಗಮದ ಆದ್ಯತೆಯಾಗಿರುತ್ತದೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ ಕಿನ್ನಾಳ ಕಲಾ ಸಂಕೀರ್ಣಕ್ಕೆ ನಿಯೋಜಿಸಿದ ಯೋಜನಾಧಿಕಾರಿಯ ಮೂಲಕ ಹೆಚ್ಚು ಕಲಾಕೃತಿಗನ್ನು ತಯಾರಿಸಿ, ನಿಗಮಕ್ಕೆ ಸರಬರಾಜು ಮಾಡುವುದಕ್ಕಾಗಿ ಕರಕುಶಲ ಕರ್ಮಿಗಳನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲಾಗುತ್ತಿದೆ.

4562



(ಎನ್. ನಾಗರಾಜು (ಎಂ.ಟಿ.ಬಿ)

ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು

ಸಾರ್ವಜನಿಕ ಉದ್ದಿಮೆಗಳ ಸಚಿವರು.

157 C